*ಪ್ರಾರಂಭಿಸಿದ ವೇಳೆಃ ಮಧ್ಯಾಹ್ನ 04.59 ಗಂಟೆ*

**ಸಾಕ್ಷಿಯನ್ನು ದಿನಾಂಕ 08.02.2021 ರಂದು ನ್ಯಾಯಾಲಯಕ್ಕೆ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀಸವಾಲು ಃಃ ವಾದಿ ಪರ ವಕೀಲರಾದ ಶ್ರೀ ಕೆ.ಪಿ.ಎಂ. ರವರಿಂದಃ-**

ಈ ದಾವೆಯನ್ನು ವಾದಿ ಮಾಡಿದಾಗ ಅವರ ನಿವೇಶನದಲ್ಲಿ ನಾವು ಕಟ್ಟಡ ಕಟುತ್ತಿದ್ದೇವೆ ಎಂದು ಹೇಳಿ ದಾವೆ ಮಾಡಿರುತ್ತಾರೆ. ವಾದಿ ನನ್ನ ವಿರುದ್ಧ ಪೊಲೀಸ್ ಪಿರ್ಯಾದು ನೀಡಿದ್ದರು ಎಂದರೆ ಸರಿಯಲ್ಲ. ವಾದಿಯು ಪೊಲೀಸ್ ಪಿರ್ಯಾದು ನೀಡಿರುವುದಿಲ್ಲ, ಆದರೆ ಈ ದಾವೆಯನ್ನು ಕಟ್ಟಡ ಕಟ್ಟುವುದು ನಿಲ್ಲಿಸಿ ಎಂದು ಸಲ್ಲಿಸಿರುತ್ತಾರೆ. ನಾವು ನ್ಯಾಯಾಲಯದ ಅನುಮತಿ ಪಡೆದು ಕಟ್ಟಡವನ್ನು ಕಟ್ಟುವುದನ್ನು ಮುಂದುವರೆಸಿರುತ್ತೇವೆ. ಇದೇ ನ್ಯಾಯಾಲಯವು ಕಟ್ಟಡ ಕಟ್ಟಲು ಅನುಮತಿ ನೀಡಿದ್ದು, ನನಗೆ ಅದರ ಅಸಲು ದಾವೆ ಸಂಖ್ಯೆ ನೆನಪಿಲ್ಲ. ಈ ದಾವೆಯನ್ನು ಹೊರತುಪಡಿಸಿ ಬೇರೆ ಯಾವುದೇ ದಾವೆ ಇರುವುದಿಲ್ಲ.

ವಾದಿ ಸಲ್ಲಿಸಿದ ಮಧ್ಯಂತರ ಅರ್ಜಿಯು ವಜಾ ಆದ ನಂತರ ಅವರು ಅದರ ಮೇಲೆ ಎಂ.ಎ. 41/2012 ಮತ್ತು 42/2012 ನ್ನು ಸಲ್ಲಿಸಿದ್ದರು ಎಂದರೆ ಸರಿ. ಎಂ.ಎ. 41/2012 ಮತ್ತು 42/2012 ಚಾಲ್ತಿಯದಲ್ಲಿದ್ದಾಗಲೇ ನಾನು ನನ್ನ ಕಟ್ಟಡವನ್ನು ಕಟ್ಟಿ ಮುಗಿಸಿದ್ದೆ. ಈ ದಾವೆ ಚಾಲ್ತಿಯಲ್ಲಿದ್ದಾಗಲೇ ಕಟ್ಟಡ ಕಟ್ಟಿರುತ್ತೀರಾ ಎಂದರೆ ಸಾಕ್ಷಿಯು ಅವರ ಪರ ಇಂಜಕ್ಷನ್ ರದ್ದಾದ ಕಾರಣ ನಾನು ಕಟ್ಟಡ ಕಟ್ಟಿದ್ದೇನೆ ಎಂದು ನುಡಿಯುತ್ತಾರೆ. ನಿಡಿ.1 ರಲ್ಲಿ ದಾವಾಆಸ್ತಿಯ ಮಾರುಕಟ್ಟೆ ಬೆಲೆಯನ್ನು ರೂ.27,000/- ಎಂದು ತೋರಿಸಿರುತ್ತೇವೆ ಎಂದರೆ ಸರಿ. ನಿಡಿ.2 ಫೋಟೋ ಈಗ ಕಟ್ಟಡ ಇರುವ ಪರಿಸ್ಥಿತಿ. ಕಟ್ಟಡವನ್ನು ನಾವು ಸಂಪೂರ್ಣವಾಗಿ ಕಟ್ಟಿರುವುದಿಲ್ಲ. ಹಳೆಯ ಪಾಯದ ಮೇಲೆ ನಾವು ಕಟ್ಟಡ ಕಟ್ಟಿದ್ದೇವೆ ಎಂದರೆ ಸರಿ.

ದಾವಾಆಸ್ತಿಯು ನಾಚಪಲ್ಲಿ ಗ್ರಾಮದಲ್ಲಿ ಬರುತ್ತದೆ. ದಾವಾಆಸ್ತಿಯನ್ನು ಹೊಂದಿಕೊಂಡು ಯಾವುದೇ ಮುಖ್ಯ ರಸ್ತೆ ಇಲ್ಲ ಎಂದರೆ ಸರಿ. ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಎಷ್ಟು ಚದರಕ್ಕೆ ಕಟ್ಟಡ ಕಟ್ಟಿದ್ದೇವೆ ಎಂದು ತೋರಿಸಿರುವುದಿಲ್ಲ ಎಂದರೆ ಸರಿ. ಉಪನೊಂದಣಾಧಿಕಾರಿರವರ ಪತ್ರವನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲಾತಿಯನ್ನು ದಾವಾಆಸ್ತಿಯು ರೂ.5,00,000/- ಬೆಲೆಬಾಳುತ್ತದೆ ಎಂದು ನಾನು ಹಾಜರುಪಡಿಸಿರುವುದಿಲ್ಲ. ಎಂ.ಎ. ನಂ. 41/2012 ಮತ್ತು 42/2012 ರಲ್ಲಿ ದಾವೆಯನ್ನು ತಿದ್ದುಪಡಿ ಮಾಡಲು ಅನುಮತಿ ನೀಡಿದ ಮೇರೆಗೆ ವಾದಿಯು ತಿದ್ದುಪಡಿ ಅರ್ಜಿಯನ್ನು ಸಲ್ಲಿಸಿ ದಾವೆಯನ್ನು ತಿದ್ದುಪಡಿ ಮಾಡಿಕೊಂಡಿದ್ದಾರೆ ಎಂದರೆ ಸರಿ. ನಿಡಿ.2 ರಲ್ಲಿ ಕಾಣುವಷ್ಟೇ ಕಟ್ಟಡ ಕಟ್ಟಡಲಾಗಿದೆ ಎಂದರೆ ಸಾಕ್ಷಿಯು ಈಗ ಸಂಪೂರ್ಣ ಕಟ್ಟಡ ಕಟ್ಟಿ ಮುಗಿಸಲಾಗಿದೆ ಎಂದು ನುಡಿಯುತ್ತಾರೆ. ನನ್ನ ಸಾಕ್ಷ್ಯ ಪ್ರಮಾಣಪತ್ರವನ್ನು ಸಲ್ಲಿಸಿದಾಗ ನಾನು ಸಂಪೂರ್ಣ ಕಟ್ಟಡ ಕಟ್ಟಿ ಮುಗಿಸಿದ್ದೇನೆ ಎಂದು ತೋರಿಸಲು ಫೋಟೋ ಹಾಜರುಪಡಿಸಿಲ್ಲ, ಸಾಕ್ಷಿಯು ಮುಂದುವರೆದು ನಮ್ಮನ್ನು ಯಾರೂ ಕೇಳಿಲ್ಲ ಎಂದು ನುಡಿಯುತ್ತಾರೆ. ನಾನು ದಾಖಲಾತಿಗಳನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಅದರಿಂದ ತಪ್ಪಿಸಿಕೊಳ್ಳಲು ಈಗ ಈ ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ನ್ಯಾಯಾಲಯಕ್ಕೆ ಪ್ರಸ್ತುತ ದಾವೆಯನ್ನು ನಡೆಸುವ ಅಧಿಕಾರವಿದೆ ಎಂದು ನನಗೆ ತಿಳಿದಿದ್ದರೂ ನಾನು ದಾವೆಯನ್ನು ತಡ ಮಾಡುವ ಉದ್ದೇಶದಿಂದ ನನ್ನ ಸಾಕ್ಷ್ಯ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಈ ದಾವೆಯನ್ನು ನಡೆಸಲು ಅಧಿಕಾರ ಇಲ್ಲ ಎಂದು ನಾನು ಹೇಳಿರುವುದಿಲ್ಲ.

**ಮರುವಿಚಾರಣೆಃ ಇಲ್ಲ.**

***ಮುಕ್ತಾಯದ ವೇಳೆಃ ಮಧ್ಯಾಹ್ನ 05.17 ಗಂಟೆ***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ )

ಓದಿ ಹೇಳಿ ಕೇಳಿ ಸರಿ ಇದೆ,

**(ರೂಪ. ಎಂ.ಡಿ.)**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಅಪರ

ಜೆ.ಎಂ.ಎಫ್.ಸಿ. ಕೆ.ಜಿ.ಎಫ್.